# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/357/11-12

ದಿನಾಂಕ :08-09-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ನಾಯಕರ ಚಿನಾನಂದಪ್ಪ ತಂದೆ ಈರಣ್ಣ<br>ಸಾ\|\|ಮುಷ್ಠಗಟ್ಟಿ ಗ್ರಾಮ, ತಾ\|\|ಬಳ್ಳಾರಿ<br><br>**(ಶ್ರೀ ಪಿ ಮಲ್ಲಯ್ಯ, ವಕೀಲರು, ಬಳ್ಳಾರಿ)** | 1. ನಾಡ ತಹಶೀಲ್ದಾರರು, ಕುರುಗೋಡು<br>2. ಕಂದಾಯ ನಿರೀಕ್ಷಕರು, ಕುರುಗೋಡು<br>3. ಗ್ರಾಮ ಲೆಕ್ಕಾಧಿಕಾರಿಗಳು, ಮುಷ್ಠಗಟ್ಟಿ<br>4. ಶ್ರೀಮತಿ ಮಲ್ಲಮ್ಮ ಗಂಡ ಬಸವರಾಜ, ಸಾ\|\|ಮುಷ್ಠಗಟ್ಟಿ ಗ್ರಾಮ ತಾ\|\|ಬಳ್ಳಾರಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಮುಷ್ಠಗಟ್ಟಿ | 22/31 | 1.06 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಕುರುಗೋಡು ಇವರಲ್ಲಿ ಇವರ ಎಂ.ಆರ್ ನಂ 41/2009-10 ದಿನಾಂಕ: 30.10.2009 ರ ಹಕ್ಕುಬದಲಾವಣೆವಿರುದ್ಧ ಮೇಲ್ಮನವಿ ಸಲ್ಲಿಸರುತ್ತಾರೆ ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 10-01-2012, 13-03-2013, 03-03-2015, 15-04-2016, 10-05-2016, 26-08-2016, ಮತ್ತು 08-09-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು, ಬಳ್ಳಾರಿ ತಾಲ್ಲೂಕಿನ ಮುಷ್ಠಗಟ್ಟಿ ಗ್ರಾಮದ ಸ.ನಂ 22/31 ವಿಸ್ತೀರ್ಣ: 1.06 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಕುರುಗೋಡು ಇವರ ಎಂ.ಆರ್ ನಂ 41/2009-10 ದಿನಾಂಕ: 30.10.2009 ರ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಯನ್ನು ಪರಿಶೀಲಿಸಲಾಗಿ, ಸದರಿ ಹಕ್ಕುಬದಲಾವಣೆಯು ಕಂದಾಯ ನಿರೀಕ್ಷಕರಿಂದ ಅನುಮೋದನೆ (ಖಾತ ವರ್ಗಾವಣೆ) ಯಾಗಿರುವುದಿಲ್ಲ. ಮುಂದುವರೆದು ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಗಿ ವಾದಿಗೆ ಸದರಿ ಜಮೀನು 1978 ದಿನಾಂಕ 31-08-19798 ರಲ್ಲಿ No DRA Dis/Lnd/345/REG/78-79 ರನ್ವಯ ಮಂಜೂರಾದ ಜಮೀನಾಗಿರುತ್ತದೆ. ಹಾಗೂ 1978 ರಿಂದ 2011 ವರಿಗೂ ಪಹಣಿಯಲ್ಲಿ ಮಂಜೂರುದಾರರ(ಅಪೀಲುದಾರ) ಹೆಸರು ಪಹಣಿಯಲ್ಲಿ ನಮೂದಾಗಿರುವ ಕುರಿತು ಕೈಬರಹ ಪಹಣಿ ಮತ್ತು ಗಣಕಿಕೃತ ಪಹಣಿಯನ್ನು ವಾದಿಗಳು ಹಾಜರು ಪಡಿಸಿರುತ್ತಾರೆ.

ದಿನಾಂಕ 08-09-2016 ರಂದು ವಿಚಾರಣೆಗೆ ಹಾಜರಾದ ವಾದಿಪರ ವಕೀಲರು ಪ್ರಕರಣವನ್ನು ಮುಂದುವರೆಸಲು ಆಸಕ್ತಿಯಿಲ್ಲವೆಂದು ವಾದಿಪರ ವಕೀಲರು ಸಲ್ಲಿಸಿರುವ ಮೆಮೋ (NOT PRESS MEMO) ನ್ನು ಸಲ್ಲಿಸಿ ಪ್ರಕರಣ ಮುಕ್ತಾಯಗೊಳಿಸುವಂತೆ ಕೋರಿರುತ್ತಾರೆ ಕಾರಣ ಈ ಕೆಳಕಂಡ ಆದೇಶ .

ಮುಂದಿನ ಪುಟ